# ನರಸಿಂಹನ ಪಾದ ಭಜನೆಯ ಮಾಡೋ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 35.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 310.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 286.
4. **Note:** Lyrics given here are as per Ref. 1. The wordings in Ref. 3 are similar to Ref. 1. The wordings in Ref. 2 are similar to Ref. 1 with few differences which are not considered here. The wordings in Ref. 1 seems to be more correct.
5. **Note:** Singer has followed wordings as in Ref. 2.

ರಾಗ: ಕೇದಾರ ಗೌಳ ತಾಳ: ಆದಿ

ನರಸಿಂಹನ ಪಾದ ಭಜನೆಯ ಮಾಡೊ || ಪ ||

ನರಸಿಂಹನ ಪಾದ ಭಜನೆಯ ಮಾಡಲು
ದುರಿತ ಪರ್ವತವ ಖಂಡಿಸುವ ಕುಲಿಶದಂತೆ || ಅಪ ||

ತರಳನ ಮೊರೆ ಕೇಳಿ ತವಕದಿಂದಲಿ ಬಂದು
ದುರುಳನ ಕರುಳ ತನ್ನ ಕೊರಳಲ್ಲಿ ಧರಿಸಿದ || ೧ ||

ಸುರರೆಲ್ಲ ನಡುಗಲು ಸಿರಿದೇವಿ ಮೊರೆಯಿಡೆ
ತ್ವರದಿ ಕಂಭದಿ ಬಂದ ವೈಕುಂಠಪತಿ ನಮ್ಮ || ೨ ||

ಹರ ವಿರಿಂಚ್ಯಾದಿಗಳು ಕರವೆತ್ತಿ ಮುಗಿಯಲು
ಪರಮ ಶಾಂತನಾದ ಪುರಂದರ ವಿಠಲ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ನರಸಿಂಹನ ಉಪಾಸನೆಯಿಂದ ಎಂತೆಂತಹ ದುರಿತಗಳು ನಾಶವಾಗುವವೆಂಬುದನು ಇಲ್ಲಿ ದಾಸರು ಹೇಳಿದ್ದಾರೆ.

**ಕುಲಿಶ –** ವಜ್ರಾಯುಧ. ಮೊದಲಿಗೆ ಬೆಟ್ಟಗಳಿಗೆ ರೆಕ್ಕೆಗಳಿದ್ದುವೆಂದೂ, ಅವು ಹಾರಾಡುತ್ತ ದೇವಲೋಕ ಭೂಲೋಕಗಳ ನಿವಾಸಿಗಳಿಗೆ ಉಪದ್ರವ ಕೊಡುತ್ತಿದ್ದುದರಿಂದ ಇಂದ್ರನು ತನ್ನ ವಜ್ರಾಯುಧದಿಂದ ಅವುಗಳ ರೆಕ್ಕೆಗಳನ್ನು ಕತ್ತರಿಸಿದನೆಂದೂ ಅಂದಿನಿಂದ ಅವು ಅಚಲವೆನಿಸಿಕೊಂಡುವೆಂದೂ ಕಥೆ.

**ತರಳನ –** ಪ್ರಹ್ಲಾದನ.

**ದುರುಳನ –** ಹಿರಣ್ಯಕಶಿಪುವಿನ.

**ವಿರಿಂಚಿ** = ಬ್ರಹ್ಮ

**ದುರಿತ** = ಪಾಪ, ಕಷ್ಟ

**Classification:** Keerthane
**Ankita:** purandara vittala
**Location:** NA
**Category:** Narasimha Avatara, Dashavatara
**Sub-Category:** dashavatara, Narasimha, brahma, shiva, papa, prahallada, bhajane, parvata, asura, sura, vaikunta, Vishnu, kai,
**Pravachana:** Vid Kallapur Pavamanachar
**Explanation:** NA